ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com
ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ4/84222/2017-18

ದಿನಾಂಕ : 31 MAY 2019

ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನಾ ವಿಭಾಗ,
ಬೆ.ವಿ.ಸ.ಕಂ,
ಹರಿಹರ.

ಮಾನ್ಯರೆ,

ವಿಷಯ: 2014 ಮತ್ತು 2017-18 ನೇ ಸಾಲಿನಲ್ಲಿ ನೇರ ನೇಮಕಾತಿ ಹೊಂದಿರುವ ಕಿರಿಯ ಪವರ್ ಮ್ಯಾನ್ ನೌಕರರುಗಳಿಗೆ ತರಬೇತಿಯ ಅವಧಿಯಲ್ಲಿ ನೌಕರನ ಅವಲಂಬಿತರಿಗೆ (ತಂದೆ ತಾಯಿ ಪತ್ನಿ ಮತ್ತು ಮಕ್ಕಳು) ವೈದ್ಯಕೀಯ ಮುಂಗಡ/ ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರು ಮಾಡುವ ಸ್ಪಷ್ಟೀಕರಣ ನೀಡುವ ಕುರಿತು.

ಉಲ್ಲೇಖ:
1) ನಿಗಮದ ಸುತ್ತೋಲೆ ಸಂಖ್ಯೆ:ಕವಿಪ್ರನಿನಿ/ಬಿ16/3281(VII)/2014-15 ದಿನಾಂಕ 26.02.2016.
2) ನಿಗಮದ ಟಿಪ್ಪಣಿ ದಿನಾಂಕ 10.01.2019
3) ನಿಮ್ಮ ಪತ್ರ ಸಂಖ್ಯೆ:ಕಾನಿಇಂ(ವಿ)/ಲೆಅ/ಸಲೆಅ/ಹಿಸ(ಸಾ)/ ಎಫ್-2/2019-20/128 ದಿನಾಂಕ 05.04.2019

--

ಉಲ್ಲೇಖ (3) ರ ನಿಮ್ಮ ಪತ್ರ ದಿನಾಂಕ 05.04.2019 ರ ಪತ್ರದಲ್ಲಿ ಹರಿಹರ ವಿಭಾಗದ ವ್ಯಾಪ್ತಿಯಲ್ಲಿ 2014-15 ಮತ್ತು 2017-18 ನೇ ಸಾಲಿನಲ್ಲಿ ನೇರ ನೇಮಕಾತಿಯಡಿಯಲ್ಲಿ ನೇಮಕ ಹೊಂದಿರುವ **ಕಿರಿಯ ಪವರ್ ಮ್ಯಾನ್ ನೌಕರರುಗಳಿಗೆ ಮತ್ತು ಅವರ ಅವಲಂಬಿತರಿಗೆ** (ತಂದೆ, ತಾಯಿ, ಪತ್ನಿ ಮತ್ತು ಮಕ್ಕಳು) ವೈದ್ಯಕೀಯ ಮುಂಗಡ/ವೈದ್ಯಕೀಯ ವೆಚ್ಚ ಮರುಪಾವತಿ/ ಮಂಜೂರಾತಿ/ಅರ್ಹತೆಯ ಬಗ್ಗೆ ಮತ್ತು ಇವರ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ **ಮೂರು ವರ್ಷದ ತರಬೇತಿ ಅವಧಿಯಲ್ಲಿ** ಮತ್ತು **ನಂತರ ಎರಡು ವರ್ಷ ಪರೀಕ್ಷಾರ್ಥ ಅವಧಿಯಲ್ಲಿ** ಈ ನೌಕರರುಗಳಿಗೆ ಅವರ ಅವಲಂಬಿತರಿಗೆ ವೈದ್ಯಕೀಯ ಮುಂಗಡ/ ವೈದ್ಯಕೀಯ ವೆಚ್ಚ ಮರುಪಾವತಿ/ಮಂಜೂರಾತಿ/ ಅರ್ಹತೆಯ ಬಗ್ಗೆ ಮಂಜೂರು ಮಾಡಬೇಕೆ? ಅಥವಾ ಬೇಡವೆ ಎಂಬ ಬಗ್ಗೆ ಸೂಕ್ತ ಸ್ಪಷ್ಟೀಕರಣ ತಿಳಿಸುವಂತೆ ಕೋರಿರುತ್ತೀರಿ.

ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನೇಮಕಗೊಂಡ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಮಾರ್ಗದಾಳು ರವರುಗಳಿಗೆ ತರಬೇತಿಯ ಅವಧಿಯಲ್ಲಿ ನೀಡಬಹುದಾದ ಸೌಲಭ್ಯಗಳ ಕುರಿತು ನಿಗಮದ ದಿನಾಂಕ: 26.02.2016 ರ ಸುತ್ತೋಲೆಯಲ್ಲಿ ಸ್ಪಷ್ಟೀಕರಣವನ್ನು ನೀಡಲಾಗಿರುತ್ತದೆ ಅದರಂತೆ ಸದರಿಯವರುಗಳು ಕವಿಮಂ ವೈದ್ಯಕೀಯ ನಿಯಮಾವಳಿಗಳ ಕಾಯಿದೆ 1987 ರ ಪ್ರಕಾರ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಹರಾಗಿದ್ದು, ಕಾರ್ಮಿಕರ ಆರೋಗ್ಯ ವಿಮೆಯ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

ಆದುದರಿಂದ ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಸರಬರಾಜು ಕಂಪನಿಗಳಲ್ಲಿ ನೇಮಕಗೊಂಡ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಪವರ್ ಮ್ಯಾನ್ ಹುದ್ದೆಗಳ ನೌಕರರು ಮತ್ತು ಅವಲಂಬಿತರು ವೈದ್ಯಕೀಯ ನಿಯಮಾವಳಿಗಳ ಕಾಯಿದೆ 1987 ರ ಪ್ರಕಾರ ವೈದ್ಯಕೀಯ ಹಿಂಪಾವತಿ ವೆಚ್ಚ ಹಾಗೂ ಇತರೆ ವೈದ್ಯಕೀಯ ಸೌಲಭ್ಯಗಳಿಗೆ ಅರ್ಹರಿರುತ್ತಾರೆಂದು ಮತ್ತೊಮ್ಮೆ ಸ್ಪಷ್ಟೀಕರಣ ನೀಡಲಾಗಿದೆ.

ಮುಂದುವರೆದು ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಪವರ್ ಮ್ಯಾನ್‌ಗಳು ತರಬೇತಿಯ ಅವಧಿಯಲ್ಲಿ ಪೂರ್ಣಾವಧಿಯ ನೌಕರನಾಗಿರುವುದಿಲ್ಲ. ಆದಾಗ್ಯೂ ಮೂರು ವರ್ಷದ ತರಬೇತಿ ಅವಧಿಯ ನಂತರ ಕಾಲಿಕ ವೇತನ ಶ್ರೇಣಿಯ ಮೇಲೆ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇರೆಗೆ ನೇಮಿಸಿದಾಗ ನಿಗಮದ ಪೂರ್ಣಾವಧಿಯ ನೌಕರನಾಗುತ್ತಾನೆ. ಮೂರು ವರ್ಷದ ತರಬೇತಿ ಅವಧಿ ಮುಕ್ತಯವಾದ ನಂತರ ಪರೀಕ್ಷಾರ್ಥ ಅವಧಿಗೆ ಹಾಜರಾದ ದಿನಾಂಕದಂದು ಸದರಿಯವರುಗಳ ಸೇವಾ ಜೇಷ್ಠತೆಯನ್ನು ಪರಿಗಣಿಸುವ ಕುರಿತು ನೇಮಕಾತಿ ಪ್ರಸ್ತಾವನೆಯಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಪವರ್ ಮ್ಯಾನ್‌ಗಳು ಮೂರು ವರ್ಷದ ತೃಪ್ತಿಕರ ತರಬೇತಿಯನ್ನು ಪೂರೈಸಿ, ಪರೀಕ್ಷಾರ್ಥ ಅವಧಿ ಪ್ರಾರಂಭವಾದ ದಿನದಿಂದ ಮುಂದಿನ ಸೇವಾ ಅವಧಿಗೆ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ಯೋಜನೆಗೆ ಒಳಪಡುತ್ತಾರೆ.

ಅದರಂತೆ, ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಪವರ್ ಮ್ಯಾನ್‌ಗಳು ರವರುಗಳಿಗೆ ಎನ್.ಡಿ.ಸಿ.ಪಿ.ಎಸ್. ವತಿಯಿಂದ ನೀಡಲಾಗುವ ಎಲ್ಲಾ ಸೇವಾ ಸೌಲಭ್ಯಗಳಿಗೆ, ಕಾಲಿಕ ವೇತನ ಶ್ರೇಣಿಯ ಆಧಾರದ ಮೇಲೆ ಪರೀಕ್ಷಣಾ ಅವಧಿ ಪ್ರಾರಂಭವಾದ ದಿನಾಂಕವನ್ನು, ಸೇವೆಗೆ ಸೇರಿದ ದಿನಾಂಕವೆಂದು ಪರಿಗಣಿಸುವಂತೆ ಸ್ಪಷ್ಟೀಕರಣ ನೀಡಲಾಗಿದೆ **ಹಾಗೂ 3 ವರ್ಷಗಳ ತರಬೇತಿ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಪವರ್ ಮ್ಯಾನ್‌ಗಳು ತಮ್ಮ ಅವಲಂಬಿತರ ವೈದ್ಯಕೀಯ ಹುಂಡಿಗಳನ್ನು ಮರುಪಾವತಿಸಲು ಅವಕಾಶವಿರುತ್ತದೆ ಎಂಬುದನ್ನು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.**

ತಮ್ಮ ವಿಶ್ವಾಸಿ

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿ:-

1) ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವೃತ್ತಗಳು, ಎಸ್ಕಾಂಗಳು/ಕವಿಪ್ರನಿನಿ
2) ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವಿಭಾಗಗಳು, ಎಸ್ಕಾಂಗಳು/ಕವಿಪ್ರನಿನಿ